# 8

# ಯೇಸು ಏಕೆ ಮರಣವನ್ನು ಹೊಂದಿದನು?

ಯೇಸು ಮರಣವನ್ನು ಅನುಭವಿಸಿದ ವಿಚಾರವನ್ನು ಅರಿತ ನಂತರ, ಇನ್ನೊಂದು ಪ್ರಮುಖವಾದ ಪ್ರಶ್ನೆಯು ನಮ್ಮ ಮುಂದೆ ಇರುತ್ತದೆ: ಯೇಸು *ಏಕೆ* ಮರಣವನ್ನು ಹೊಂದಿದನು? ಆ ವಿಧವಾದ ಬಾಧೆಗಳ ಸಹಿತ ಮರಣವನ್ನು ಏಕೆ ಅನುಭವಿಸಿದನು? ಅದಕ್ಕೆ ಕಾರಣರಾದವರ ಹೆಸರನ್ನು ತಿಳಿಯಬಹುದೇ?

ಎರಡು ಅಂಶಗಳ ಮೂಲಕ ಈ ವಿಚಾರವನ್ನು ವಿವರಿಸಬಹುದು: ಒಂದು ಐತಿಹಾಸಿಕ ಮತ್ತೊಂದು ದೈವ ಶಾಸ್ತ್ರ. ಆತನ ಮರಣಕ್ಕೆ ಕಾರಣವಾದ ಐತಿಹಾಸಿಕ ಉತ್ತರವೇನು ಆತನ ಮರಣಕ್ಕೆ ದೈವ ಶಾಸ್ತ್ರವು ಯಾವ ಉತ್ತರವನ್ನು ನೀಡುತ್ತದೆ (ಲೂಕ 9:22; 24:45-47)? ಆತನ ಮರಣದಿಂದ ಯಾವ ಸಾಧನೆ ಉಂಟಾಯಿತು?

## ಆತನ ಮರಣದ ಕುರಿತ ಐತಿಹಾಸಿಕ ಕಾರಣಗಳು

### ಮನುಷ್ಯ ನಿರ್ಮಿತ ಯೆಹೂದ್ಯರ ಹುರುಳಿಲ್ಲದ ಸಂಪ್ರದಾಯಗಳು

ಮೊದಲನೆಯದಾಗಿ ಆತನ ಮರಣದ ಕುರಿತ ಐತಿಹಾಸಿಕ ಕಾರಣಗಳನ್ನು ಗಮನಿಸೋಣ. ಮಾರ್ಕ 3:1-6 ರಂತೆ, ಯೇಸುವಿನ ಆರಂಭದ ಸೇವೆಯಲ್ಲಿ ಗಲಿಲಾಯದ ಧಾರ್ಮಿಕ ನಾಯಕರಿಗೆ, ಆತ್ಮೀಕ ಪ್ರಶ್ನೆಗಳನ್ನು ಆತನು ಕೇಳಿದ್ದರಿಂದ ಅವರು ಆತನನ್ನು ದ್ವೇಷಿಸಿದರು. ಒಂದು ಸಬ್ಬತ್ತಿನ ದಿನದಲ್ಲಿ ಒಬ್ಬ ಕೈ ಬತ್ತಿ ಹೋದವನನ್ನು ಆತನು ಗುಣಪಡಿಸಿದನು. ಅವನನ್ನು ಯೇಸು ಗುಣಪಡಿಸುವ ಮೂಲಕ, ಸಬ್ಬತ್ ದಿನವನ್ನು "ನಿರ್ಲಕ್ಷಿಸುವನೋ" ಎಂದು ಧಾರ್ಮಿಕ ನಾಯಕರು ಕಾದುಕೊಂಡಿದ್ದರು. ಮಾನವೀಯ ದೃಷ್ಟಿಯಿಂದ ಒಬ್ಬನನ್ನು ಸಬ್ಬತ್ ದಿನದಲ್ಲಿ ಸ್ವಸ್ಥ ಪಡಿಸುವದು ಅಥವಾ ಒಳ್ಳೆಯದನ್ನು ಮಾಡುವದು ನ್ಯಾಯವಾದದ್ದು ಎಂದು ನಿರೂಪಿಸಿದನು. ಅವರು ತಾವು ಕಠಿಣ ಹೃದಯಗಳೆಂದು ತೋರ್ಪಡಿಸಬಾರದು ಎಂದು ಹಾಗೂ ತಮ್ಮದೇ ಆದ ಸಂಪ್ರದಾಯಗಳನ್ನು ಮುರಿಯಬಾರದೆಂದು ಮೌನವಾಗಿದ್ದರು. ಯೇಸು ಅವರ ಕಠಿಣವಾದ ಹೃದಯವನ್ನು ಗಮನಿಸಿ, ಆ ಮನುಷ್ಯನನ್ನು ಗುಣಪಡಿಸಿದನು. ಆದ್ದರಿಂದ ಮಾರ್ಕ 3:6ರಲ್ಲಿ ಫರಿಸಾಯರು ಕೋಪಗೊಂಡರು. ಹೊರಕ್ಕೆ ಹೋಗಿ ಕೂಡಲೇ ಹೆರೋದ್ಯರನ್ನು ಕೂಡಿಕೊಂಡು ಇವನನ್ನು ಯಾವ ಉಪಾಯದಿಂದ ಕೊಲ್ಲೋಣ ಎಂದು ಆತನಿಗೆ ವಿರೋಧವಾಗಿ ಆಲೋಚನೆ ಮಾಡಿಕೊಂಡರು. ಆತನ ಮೇಲಿನ ಸೇಡು ಎಷ್ಟಿತ್ತೆಂದರೆ, ಈ ಎರಡು ವೈರಿಗಳ ಗುಂಪು ಯೇಸುವಿನ ನಿಮಿತ್ತ ಒಂದಾಗಿ ಆತನ ಮೇಲೆ ಕೋಪಗೊಂಡರು. ಫರಿಸಾಯರು ಧರ್ಮಶಾಸ್ತ್ರವನ್ನು ಅನುಸರಿಸುವವರಾಗಿದ್ದು, ರೋಮಾಯರು, ಯೆಹೂದ್ಯರ ಮೇಲೆ ತಮ್ಮ ಆಡಳಿತವನ್ನು ಮಾಡಬಾರದೆಂದು ಅಪೇಕ್ಷಿಸಿದ್ದರು. ಹೆರೋದ್ಯರು ಬಹು ಶ್ರೀಮಂತರಾಗಿದ್ದು, ಹೆರೋದನ ರಾಜಕೀಯ ಇಚ್ಛಾ ಶಕ್ತಿಯನ್ನು ಪ್ರೋತ್ಸಾಹಪಡಿಸುತ್ತಿದ್ದರು, ಮತ್ತು ರೋಮಾಯರಿಗೆ ಸಹಕಾರ ನೀಡುವವರಾಗಿದ್ದರು, ಆದರೆ ಯೇಸುವಿಗೆ ವಿರೋಧ ವ್ಯಕ್ತಪಡಿಸಲು ಈ ಎರಡು ಗುಂಪುಗಳು ಒಟ್ಟಾದರು. ಯೇಸುವಿನ ಸೇವೆಯ ಆರಂಭದಲ್ಲಿಯೇ ಧಾರ್ಮಿಕ ನಾಯಕರುಗಳು ಯೇಸುವನ್ನು ನಾಶಪಡಿಸಲು ಯತ್ನಿಸಿದರು.

### ಯೆಹೂದ್ಯರೊಂದಿಗೆ ಮಾತಿನ ಚಕಮಕಿ

ಯೇಸು ತನ್ನ ಅಂತ್ಯದ ವಾರವನ್ನು ಕಳೆಯಲು ಯೆರೂಸಲೇಮಿಗೆ ಬಂದಾಗ ಅಲ್ಲಿ ಆತನ ಕುರಿತಾದ ದ್ವೇಷವು ಇನ್ನು ಅಧಿಕಗೊಂಡಿತು. ಮತ್ತಾಯ 22:15-46ರಲ್ಲಿ ಯೇಸುವಿನ ಹಾಗೂ ಯೂದಾಯರ ವಿವಿಧ ಗುಂಪುಗಳ ನಡುವೆ ಮಾತಿನ ವಾಗ್ವಾದವು ಅಧಿಕವಾಯಿತು ಎಂದು ಗಮನಿಸುತ್ತೇವೆ. ಆತನನ್ನು ಶಿಲುಬೆಗೆ ಹಾಕುವ ಕಾರಣವನ್ನು ಪಡೆಯಲು ವಿವಿಧವಾದ ಕುಯುಕ್ತಿಗಳನ್ನು ರೂಪಿಸಿದರು, ಇದರಿಂದ ತಮ್ಮಲ್ಲಿ ಅಡಗಿದ್ದ ಆತ್ಮೀಕ ಬಲಹೀನತೆಯನ್ನು ಪ್ರದರ್ಶಿಸಿದರು. ಮೊದಲನೆಯದಾಗಿ ಯೇಸು ತಪ್ಪಿಸಿಕೊಳ್ಳಲಾರದಂತ ಆರೋಪವನ್ನು ಹೆರೋದ್ಯರು ಆತನ ಮೇಲೆ ಮಾಡಿದರು. ಕೈಸರನಿಗೆ ಸುಂಕ ನೀಡಬಹುದೇ ಎಂಬ ಪ್ರಶ್ನೆಯನ್ನು ಯೇಸುವಿಗೆ ಕೇಳಿದರು. ಒಂದು ವೇಳೆ ಸುಂಕ ನೀಡಬೇಕು ಎಂದು ಆತನು ಹೇಳಿದರೆ, ತಕ್ಷಣವೇ ಆತನಿಗೆ ಜನರಿಂದ ಅಗೌರವ ಉಂಟಾಗುವ ಸಂಭವವಿತ್ತು, ನೀಡಬಾರದು ಎಂದು ಹೇಳಿದರೆ, ರೋಮಾಯ ಅಧಿಕಾರಿಗಳಿಗೆ ಆತನು ಅಗೌರವವನ್ನು ಸೂಚಿಸುವವನಾಗಿದ್ದನು, ಆದರೆ ಯೇಸುವಿನ ಉತ್ತರದಿಂದ, ಅವರು ಉತ್ತರವಿಲ್ಲದವರಾದರು, ಮತ್ತು ಅವಮಾನಿತರಾದರು. ಆತನು ಅವರಿಗೆ ಕೈಸರನದನ್ನು ಕೈಸರನಿಗೆ ನೀಡಿರಿ, ದೇವರದನ್ನು ದೇವರಿಗೆ ಕೊಡಿರಿ ಅಂದನು (ಮಾರ್ಕ 12:17; ಲೂಕ 20:25).

ಯೆಹೂದ್ಯರ ಇತರೆ ಪ್ರತಿನಿಧಿಗಳು ಸಹ ಆತನನ್ನು ಮಾತಿನಲ್ಲಿ ಸಿಕ್ಕಿಸಬೇಕೆಂದು ಪ್ರಯತ್ನಿಸಿದರು, ಆದರೆ ಸಫಲವಾಗಲಿಲ್ಲ. ಅಂತಿಮವಾಗಿ, ಜನರಲ್ಲಿ ಗೊಂದಲವಾಗದಂತೆ, ಆತನನ್ನು ಕೊಂದು ಹಾಕುವ ಕಾರಣಗಳನ್ನು ಅರಿಯಲು ಮಹಾಯಾಜಕರ ಹಾಗೂ ಹಿರಿಯರ ಸಲಹೆ ಪಡೆದರು (ಮತ್ತಾಯ 26:3-5). ಅದು ಪಸ್ಕದ ದಿನವಾದ್ದರಿಂದ ಅವರು ಅತಿ ಎಚ್ಚರವುಳ್ಳವರಾಗಿದ್ದರು. ಆ ದಿವಸದಲ್ಲಿ ಹಬ್ಬವಾದ್ದರಿಂದ ಯೆರೂಸಲೇಮು ಜನ ಸಂದಣಿಯಾಗಿತ್ತು. ಆ ಸಮಯವು ಮೆಸ್ಸೀಯನ್ನು ಬಯಸಿದ ದಿನವಾದ್ದರಿಂದ ಜನರಲ್ಲಿ ಗೊಂದಲವಾಗುವ ಸಂಭವ ಅಧಿಕವಾಗಿತ್ತು. ಯೇಸುವನ್ನು ಜನರಲ್ಲಿ ಅನೇಕರು ಮೆಸ್ಸೀಯನೆಂದು ಅಥವಾ ಪ್ರವಾದಿಯೆಂದು ತಿಳಿದಿದ್ದರಿಂದ, ಜನರ ನಡುವೆ ಗದ್ದಲವಾಗುವ ಸಾಧ್ಯತೆಯಿತ್ತು. ಒಂದು ವೇಳೆ ಧಾರ್ಮಿಕ ನಾಯಕರು ಗದ್ದಲವೆಬ್ಬಿಸುವದಿದ್ದರೆ, ಅವರು ರೋಮಾಯರ ಕೋಪಕ್ಕೆ ತುತ್ತಾಗುತ್ತಿದ್ದರು.

ಯೇಸುವಿನ ಮಾತುಗಳು ಜನರಲ್ಲಿ ಕೋಪ ಎಬ್ಬಿಸುತ್ತಿದ್ದರೂ, ಆತನ ಮಾತುಗಳಿಂದ ಮಾತ್ರ ಆತನಿಗೆ ಶಿಕ್ಷೆ ಉಂಟಾಗಲಿಲ್ಲ. ಆತನು ಯೆರೂಸಲೇಮಿಗೆ ಬಂದ ತಕ್ಷಣ, ದೇವಾಲಯದ ಅನ್ಯರ ಅಂಗಳದಲ್ಲಿ ವ್ಯಾಪಾರ ವಹಿವಾಟು ಮಾಡುತ್ತಿದ್ದವರನ್ನು ಹೊರ ಹಾಕಿದ್ದನು (ಮಾರ್ಕ 11:15-18). ದೇವಾಲಯವನ್ನು ಅಶುದ್ಧ ಮಾಡುವ ಕಾರ್ಯದ ನಿಮಿತ್ತ ಧಾರ್ಮಿಕ ನಾಯಕರುಗಳಿಗೆ ಕೋಪ ಉಂಟಾಗಿತ್ತು, ಪ್ರಮುಖವಾಗಿ ಮಹಾಯಾಜಕರು ಹಾಗೂ ಸದ್ದುಕಾಯರು ದೇವಾಲಯದ ವ್ಯವಹಾರವನ್ನು ನೋಡಿ ಕೊಳ್ಳುತ್ತಿದ್ದರು. ಮಾರ್ಕ 11:18 ಆತನ ಉಪದೇಶವನ್ನು ಕೇಳಿದ ಜನ "ಎಲ್ಲರೂ ಕೂಗಿ" ಆಶ್ಚರ್ಯಪಟ್ಟರು. ಆದ್ದರಿಂದ ಯೆಹೂದ್ಯರ ದೃಷ್ಟಿಯಲ್ಲಿ, ಯೇಸು ಅಪಾಯಕಾರಿಯಾದ ವ್ಯಕ್ತಿಯಾಗಿದ್ದನು.

### ಯೆಹೂದ್ಯರ ನಾಯಕರ ವಿರುದ್ಧವಾದ ಉಪದೇಶ

ಯೇಸು ಹೇಳಿದ ದ್ರಾಕ್ಷೆ ತೋಟದ ಕೆಲಸಗಾರರು ಸಹ ಆತನ ಮರಣಕ್ಕೆ ಕಾರಣವಾಯಿತು (ಮತ್ತಾಯ 21:33-41; ಮಾರ್ಕ 12:1-12; ಲೂಕ 20:9-19). ಮೇಲ್ನೋಟಕ್ಕೆ ಈ ಸಾಮರ್ಥ್ಯ ಸೌಜನ್ಯವಾಗಿ ಕಂಡರೂ, ಅದು ಆ ಕ್ಷಣದ ಪ್ರಮುಖ ಅಂಶವಾಯಿತು. ತೋಟದ ಒಡೆಯನು ತೋಟದ ಕೆಲಸಗಾರನಿಗೆ ತೋಟವನ್ನು ಒಪ್ಪಿಸಿ ದೂರ ದೇಶಕ್ಕೆ ಹೋದನು. ನಂತರ ಫಲವನ್ನು ಬಯಸಿ, ತನ್ನ ಆಳುಗಳನ್ನು ತೋಟಕ್ಕೆ ಕಳುಹಿಸಿದಾಗ, ಕೆಲವರನ್ನು ಹೊಡೆದರು, ಕೆಲವರನ್ನು ಕೊಂದುಹಾಕಿದರು. ಎರಡನೆಯ ಸಾರಿಯೂ ಇದೇ ಸಂಗತಿ ಜರುಗಿತು.

ಅಂತಿಮವಾಗಿ ಆತನು ತನ್ನ ಒಬ್ಬನೇ ಮಗನನ್ನು ಕಳುಹಿಸಿ ಗೌರವವನ್ನು ಅಪೇಕ್ಷಿಸಿದನು, ಆದರೆ ಅವರು ಅವನನ್ನುಸಹ ಕೊಂದು, ಆ ವಾರಸುದಾರನನ್ನು ನಿರ್ನಾಮಮಾಡಿದರು. ಸಾಮ್ಯದ ಅಂತ್ಯದಲ್ಲಿ, ಯೇಸು ಅವರನ್ನು ಪ್ರಶ್ನಿಸಿ, ಹಾಗಾದರೆ ದ್ರಾಕ್ಷೆಯ ತೋಟದ ದಣಿಯು ಏನು ಮಾಡುವನು? ಅವನು ಬಂದು ಆ ಒಕ್ಕಲಿಗರನ್ನು ಸಂಹರಿಸಿ ತನ್ನ ತೋಟವನ್ನು ಬೇರೆ ಜನರಿಗೆ ಮಾಡುವವದಕ್ಕೆ ಕೊಡುವನು. ಈ ಸಾಮ್ಯದ ಉತ್ತರವು ಹಳೇ ಒಡಂಬಡಿಕೆಯಲ್ಲಿ ಅಡಕವಾಗಿದೆ. ಇಸ್ರಾಯೇಲ್ಯರನ್ನು ದೇವರ "ತೋಟ" ಎಂದು ಪ್ರದರ್ಶಿಸಲಾಗಿದೆ (ಯೆಶಾಯ 5:1-7; ಯೆರೆಮೀಯ 2:21). ತೋಟವನ್ನು ಬೇರೆ ಜನರಿಗೆ ನೀಡುವನು ಎಂಬುದರ ಅರ್ಥ ವೇನೆಂದರೆ, ಯೆಹೂದ್ಯದೇಶಕ್ಕೂ ಹಾಗೂ ಯೆಹೂದ್ಯ ನಾಯಕರಿಗೂ ಇದು ಒಂದು ಅಪಾಯ ಎಂಬ ಸೂಚನೆಯಾಗಿದೆ. ವಚನ 43ರಲ್ಲಿ, "ಆದದರಿಂದ ದೇವರ ರಾಜ್ಯವು ನಿಮ್ಮಿಂದ ತೆಗೆಯಲ್ಪಟ್ಟು ಅದರ ಫಲಗಳನ್ನು ಕೊಡುವ ಜನಕ್ಕೆ ಕೊಡಲಾಗುವದು ಎಂದು ಯೇಸು ತಿಳಿಸಿದನು." ಆಗ ಧಾರ್ಮಿಕ ನಾಯಕರು ಪ್ರತ್ಯುತ್ತರ ನೀಡಿ: "ಮಹಾಯಾಜಕರೂ ಫರಿಸಾಯರೂ ಆತನ ಸಾಮ್ಯಗಳನ್ನು ಕೇಳಿ ತಮ್ಮನ್ನೇ ಕುರಿತು ಮಾತಾಡುತ್ತಾನೆಂದು ತಿಳುಕೊಂಡು ಆತನನ್ನು ಹಿಡಿಯುವದಕ್ಕೆ ಸಂದರ್ಭನೋಡುತ್ತಿದ್ದರು; ಆದರೆ ಜನರು ಆತನನ್ನು ಪ್ರವಾದಿಯೆಂದು ಎಣಿಸಿದ್ದರಿಂದ ಅವರಿಗೆ ಭಯಪಟ್ಟರು" (ಮತ್ತಾಯ 21:45, 46).

### ಸ್ನೇಹಿತನಿಂದ ನಂಬಿಕೆ ದ್ರೋಹ

ತನ್ನ ಶಿಷ್ಯನಾದ ಯೂದನಿಂದಲೇ ಯೇಸು ಹಿಡುಕೊಡಲ್ಪಟ್ಟನು. ಯೋಹಾನ 18:31ರಲ್ಲಿ, ರೋಮಾಯರ ಅದೇಶವಿಲ್ಲದೆ ಯೆಹೂದ್ಯರು ಯಾರನ್ನು ಶಿಕ್ಷಿಸುವಂತಿರಲಿಲ್ಲ ಆದ್ದರಿಂದ, ಯೇಸುವಿನ ವಿರುದ್ಧ ಸುಳ್ಳು ಸಾಕ್ಷಿಯವರನ್ನು ಕರೆದುಕೊಂಡು, ಅದರ ತೀರ್ಮಾನಕ್ಕಾಗಿ ಪಿಲಾತನ ಮುಂದೆ ವಿಚಾರಣೆ ಮಾಡಲು ಬಯಸಿದರು. (ಅವರು ನಿಯಮಗಳನ್ನು ಮೀರಿರ ಲಿಲ್ಲ ಎಂಬ ಅರ್ಥವಲ್ಲ. ಅಪೊಸ್ತಲರ ಕೃತ್ಯಗಳು 7:54-8: 1 ಜನರಿಂದ ಆಯಿತೇ ವಿನಃ ನಿಯಮದ ಪ್ರಕಾರವಾಗಲಿಲ್ಲ.) ಮತ್ತಾಯ 26:57-68ರ ಪ್ರಕಾರ, ಯೇಸು ಗೆತ್ಸೇಮನೆ ತೋಟ ದಲ್ಲಿ ಹಿಡಿಯಲ್ಪಟ್ಟ ನಂತರ ಮಹಾಯಾಜಕನಾದ ಕಾಯಫನ ಬಳಿಗೆ ಕರೆತಂದರು, ಆಗ ಅಲ್ಲಿ ನೆರೆದಿದ್ದ ಯೆಹೂದ್ಯ ಧಾರ್ಮಿಕ ನಾಯಕರು ಆತನಿಗೆ ಪ್ರಶ್ನೆಗಳನ್ನು ಕೇಳಿದರು, ಅಲ್ಲಿ ಯೇಸು ದೇವ ದೂಷಣೆಯ ಮಾಡಿದನು ಎಂಬ ಆರೋಪವನ್ನು ಅವರಿಂದ ಹೊಂದಿದನು, ತಾನು ಮೆಸ್ಸೀಯನು ಎಂಬ ಕಾರಣವಾಗಲಿಲ್ಲ. 26:64, 65 ರ ಪ್ರಕಾರ, ಆತನು ದೇವರ ಬಲಪಾರ್ಶ್ವದಲ್ಲಿ ಕುಳಿತುಕೊ ಳ್ಳುವನು ಮೇಘಗಳೊಡನೆ ಬರುವನು ಎಂಬ ಆತನ ಮಾತಿನ ನಿಮಿತ್ತ, ಆತನು ಅಪರಾಧಿ ಎನಿಸಿಕೊಂಡನು. ಈ ದೈವೀಕ ಸ್ಥಾನಮಾನದ ನಿಮಿತ್ತ, "ಆತನು ಮರಣಕ್ಕೆ ಯೋಗ್ಯನು!" ಎಂಬ ತೀರ್ಪನ್ನು ಹೊಂದಿದನು (ವಚನ 66).

### ನ್ಯಾಯ ಸಮ್ಮತವಲ್ಲದ ವಿಚಾರಣೆ

ಯೇಸು ಪಿಲಾತನ ಮುಂದೆ ವಿಚಾರಣೆಗೆ ಒಳಗಾದನು. ಅವರು ಆತನ ಕುರಿತು, ಯೇಸು ದೇವದೂಷಣೆ ಮಾಡಿದನು ಎಂಬ ಅವರ ಅರೋಪದಲ್ಲಿ ಪಿಲಾತನಿಗೆ ಆಸಕ್ತಿ ಇರಲಿಲ್ಲ. ಯೇಸು ದಂಗೆ ಕೋರರರ ನಾಯಕನು ಎಂಬ ಅಪವಾದವನ್ನು ಅವರು ಮಾಡಿದರು (ಲೂಕ 23:1-5). ಕೈಸರನಿಗೆ ಸುಂಕ ನೀಡಬಾರದು ಎಂದು ಯೇಸು ಹೇಳಿದನೆಂದು ಆರೋಪಿಸಿ, ಆತನು ಅರಸನಾಗಲು ಯತ್ನಿಸುತ್ತಿರುವನು ಎಂದು ಸಹ ಆರೋಪ ಮಾಡಿದರು (ಆದರೆ ಆತನು ಅದನ್ನು ಮಾಡಿರಲಿಲ್ಲ). ಈ ಎರಡು ಆರೋಪಗಳನ್ನು ಪಿಲಾತನು ಪರೀಕ್ಷಿಸಬೇಕಿತ್ತು ಮತ್ತು ಅವನು ರೋಮಾಯರ ಆಡಳಿತದ ಆಸಕ್ತಿಯನ್ನು ಈಡೇರಿಸಬೇಕಿತ್ತು. ನಾಲ್ಕು ಸುವಾರ್ತೆಗಳ ಪ್ರಕಾರ, ಯೇಸುವಿನ ಕುರಿತಾದ ಈ ಆರೋಪಗಳು ಹುರುಳಿಲ್ಲದ್ದಾಗಿದ್ದವು. (ಯೆಹೂದ್ಯರ, ರೋಮಾಯರ ವಿಚಾರಗಳಲ್ಲಿ ಆಸಕ್ತಿ ಹೊಂದಿರಲಿಲ್ಲ) ಆದ್ದರಿಂದ ಪಿಲಾತನು

ಯೇಸುವನ್ನು ಬಿಡಿಸಲು ಯತ್ನಿಸಿದನು. ಅಂತಿಮವಾಗಿ, ಪಿಲಾತನು ಕೈಸರನಿಗೆ ವಿರೋಧಿ ಎಂಬ ಆರೋಪವನ್ನು ಎದುರಿಸಬೇಕಾಯಿತು (ಯೋಹಾನ 19:12). ಆದರೆ ಪಿಲಾತನು ಇಂತಹ ಆರೋಪವನ್ನು ಎದುರಿಸಲು ಸಿದ್ಧನಿರಲಿಲ್ಲ. ಯೇಸು ನಿರಪರಾಧಿಯಾಗಿದ್ದರೂ - ತನ್ನ ಮತ್ತು ಯೇಸುವಿನ ಮೇಲೆ ಸಲ್ಲಿಸಿದ್ದ ಆರೋಪದಲ್ಲಿ, ತಾನು ನಿರಪರಾಧಿಯಾಗಲು ಯತ್ನಿಸಿದನು, ಆದ್ದರಿಂದ ಯೇಸು ಮರಣವನ್ನು ಅನುಭವಿಸಬೇಕಾಯಿತು. ನಂತರ, "ಆತನನ್ನು ಶಿಲುಬೆಗೆ ಹಾಕಲು ಅವರಿಗೆ ಒಪ್ಪಿಸಿಬಿಟ್ಟನು" (ಯೋಹಾನ 19:16).

**ಬಲಹೀನನಾದ ಆಡಳಿತಗಾರನು**

ಯೆಹೂದ್ಯರು ಪಿಲಾತನನ್ನು ಈ ವಿಧದಲ್ಲಿ ಬಲಹೀನ ಪಡಿಸಿದ್ದರು ಎಂಬುದು ಕೆಲವರ ಅಭಿಪ್ರಾಯವಾಗಿದೆ. ಪಿಲಾತನು ಯೆಹೂದ್ಯರನ್ನು ಕೀಳಾಗಿ ಕಾಣುತ್ತಿದ್ದನು, ಅದ್ದರಿಂದ ಅವರು ಅವನನ್ನು ದ್ವೇಷಿಸುತ್ತಿದ್ದರು (ನೋಡಿರಿ ಲೂಕ 13:1); ಅದಾಗ್ಯೂ ಅವರ ಇಷ್ಟದಂತೆ ಪಿಲಾತನು ನಡಕೊಳ್ಳುವಂತೆ ಪ್ರೇರಿಸಿದ್ದರು. ಯೆರೂಸಲೇಮಿನಲ್ಲಿ ರೋಮಾಯರ ಆಡಳಿತವನ್ನು ಜಾರಿಗೆ ಮಾಡಿದ ನಿಮಿತ್ತ, ಕ್ರಿ.ಶ. 26ರಲ್ಲಿ, ಪಿಲಾತನು ಯೆಹೂದ್ಯರ ಕೋಪಕ್ಕೆ ಒಳಗಾಗಿದ್ದನು. ಒಂದು ಗುಂಪು ಪಿಲಾತನ ಬಳಿಗೆ ಬಂದು ಐದು ದಿವಸಗಳ ಕಾಲ ಅವನನ್ನು ಒತ್ತಾಯಿಸಿದ್ದರು, ಆರನೇಯ ದಿವಸದಲ್ಲಿ ಪಿಲಾತನು ತನ್ನ ಸಿಪಾಯಿಗಳಿಗೆ ಕತ್ತಿಗಳನ್ನು ಸಿದ್ಧಪಡಿಸಲು ತಿಳಿಸಿದನು. ಯೆಹೂದ್ಯರು ನಿಯಮಗಳನ್ನು ಪಾಲಿಸುವ ಸಲುವಾಗಿ, ಮರಣವನ್ನು ಹೊಂದಲು ಸಹ ಸಿದ್ಧರಿರುತ್ತಿದ್ದರು. ಯೆಹೂದ್ಯರು ದಂಗೆ ಹೇಳ ಬಹುದೆಂದು ತಿಳಿದು ಪಿಲಾತನು ಯೆರೂಸಲೇಮಿನಲ್ಲಿದ್ದ ಸಕಲ ವಿಗ್ರಹಗಳನ್ನು ತೆಗೆಸಿ ಹಾಕಿದ್ದನು.[1] ಪಿಲಾತನು ಯೆಹೂದ್ಯರಿಗೆ ಅಂಜದೆ ಹೋದರೂ, ತನ್ನ ಗೌರವವನ್ನು ಉಳಸಿ ಕೊಳ್ಳುವ ಸಲುವಾಗಿ, ಒಬ್ಬನನ್ನು ಕೊಂದುಹಾಕಲು ನಿಶ್ಚಯಿಸಿದನು.

**ವಿವಿಧ ಉತ್ತರಗಳು**

ಯೇಸು ಏಕೆ ಸತ್ತನು? ಎಂಬದು ಐತಿಹಾಸಿಕ ಪ್ರಶ್ನೆಯಾಗಿದೆ, ಅದಕ್ಕೆ ವಿವಿಧ ಉತ್ತರಗಳಿವೆ. ಆತನು ಯುದಾಯರ ಕೋಪಕ್ಕೆ ಸಿಲುಕುವಂಥ ಮಾತುಗಳನ್ನಾಡಿ ಮರಣಕ್ಕೆ ತುತ್ತಾದನು. ದೇವಾಲಯವನ್ನು ಒಳಗೊಂಡು, ಯುದಾಯರ ಇತರೆ ಅಧಿಕಾರವನ್ನು ತಾನು ಹೊಂದಿದ್ದನು. ಎಂಬ ಆತನ ನಿಲುವಿನ ಕಾರಣಕ್ಕಾಗಿ ಮರಣ ಹೊಂದಿದನು. ಯೆಹೂದ್ಯರ ಸಂಪ್ರದಾಯಗಳು ಮುರಿದು ಬೀಳುವವು ಎಂದು ಪ್ರಕಟಿಸಿ ಮರಣ ಹೊಂದಿದನು. ತನ್ನ ಸಮಕಾಲಿನವರಲ್ಲಿ ದೇವ ದೂಷಣೆಗೆ ಒಳಗಾದ ಕಾರಣ ಮರಣ ಹೊಂದಿದನು. ಮರಣವನ್ನು ಎದುರಿಸಿ ನಿಲ್ಲುವಂಥ ಯಾವುದೇ ರಾಜಕೀಯ ಅಥವಾ ಜನರ ಬೆಂಬಲ ಹೊಂದದ ಕಾರಣ ಮರಣ ಅನುಭವಿಸಿದನು. ಇದೆಲ್ಲವು ಸಹ ಐತಿಹಾಸಿಕ ಕಾರಣಗಳೇ.

**"ಯೆಹೂದ್ಯರು" ಇದಕ್ಕೆ ಕಾರಣರೇ?**

ಕ್ರೈಸ್ತರಿಗೆ, ಸಾಂಪ್ರದಾಯಿಕ ವೈರಿಗಳಾದ ಯೆಹೂದ್ಯರಿಗೆ ಆತನು ವಿರೋಧಿಯಾದ ಕಾರಣ ಆತನು ಶಿಕ್ಷೆಗೆ ಒಳಗಾದನು[2] ಎಂದು ಹೊಸ ಒಡಂಬಡಿಕೆಯಲ್ಲಿ ನೋಡುತ್ತೇವೆ (ವಿಶೇಷವಾಗಿ ನಾಲ್ಕು ಸುವಾರ್ತೆಗಳಲ್ಲಿ). ಪಿಲಾತ ಮತ್ತು ರೋಮಾಯರು ಇದಕ್ಕೆ ಕಾರಣರು, ಆದರೆ ಯೆಹೂದ್ಯ ಅಧಿಕಾರಿಗಳು ಆತನನ್ನು ಕಾಪಾಡಲು ಮುಂದಾಗಿದ್ದರೂ, ಪಿಲಾತನು ಆತನನ್ನು ಕೊಲ್ಲಲೇ ಬೇಕೆಂಬ ನಿರ್ಣಯವುಳ್ಳವನಾಗಿದ್ದನು ಎಂಬುದು ಕೆಲವರ ಅಭಿಪ್ರಾಯ. ಯೆಹೂದ್ಯರ ದ್ವೇಷಗಳು, ಯೆಹೂದ್ಯರೇ ಕ್ರಿಸ್ತನನ್ನು ಕೊಂದವರು ಎಂದು ಪ್ರತಿಪಾದಿಸಲು ಯೆಹೂದ್ಯರ ಹೆಸರನ್ನು ಬಳಸಿದರು ಎಂದು ಹೇಳಲಾಗಿದೆ. ಆದ್ದರಿಂದ ಅವರೇ ಆತನ ಮರಣಕ್ಕೆ ಕಾರಣರು ಎನ್ನಲಾಗಿದೆ. ಸುವಾರ್ತೆಯು ಈ ವಿಚಾರಗಳನ್ನು ತಿಳಿಸುತ್ತವೆಯೇ?

ಸುವಾರ್ತೆಗಳು, ಯೆಹೂದ್ಯರ ವೈರಿಗಳೇ?

ಸುವಾರ್ತೆಗಳು, ಯೆಹೂದ್ಯರ ವೈರಿಗಳು ಎಂಬುದು ಸತ್ಯಕ್ಕೆ ದೂರವಾದ ಮಾತುಗಳಾಗಿವೆ. ಯೇಸುವಿಗೆ ವಿರೋಧವಾಗಿದ್ದ ಕೆಲವು ಯೆಹೂದ್ಯರ ಕುರಿತು ಮಾತ್ರ ಸುವಾರ್ತೆಗಳು ತಿಳಿಸುತ್ತವೆ. ಸಕಲ ಯೆಹೂದ್ಯರ ಕುರಿತು ಸುವಾರ್ತೆಗಳು ಈ ರೀತಿ ಯಾಗಿ ಹೇಳುವದಿಲ್ಲ.

ಹೊಸ ಒಡಂಬಡಿಕೆಯಲ್ಲಿ ಕೆಲವು ಯೆಹೂದ್ಯರ ಕುರಿತು ಸಕಾರಾತ್ಮಕವಾಗಿ ತಿಳಿಸಲಾಗಿದೆ. ಅರಿಮಥಾಯದ ಯೋಸೇಫನು, ಯೇಸುವನ್ನು ತೆಗಳಿದ ಯೆಹೂದ್ಯ ಗುಂಪಿಗೆ ಸೇರಿದವನಾಗಿದ್ದರೂ, ಯೇಸುವಿನ ದೇಹವನ್ನು ಸಮಾದಿ ಮಾಡಲು ಪಿಲಾತನಿಂದ ಅನುಮತಿಯನ್ನು ಪಡೆದನು. ಯೇಸುವಿಗೆ ಮಿತ್ರನಾದವನು ಈ ಕಾರ್ಯವನ್ನು ಮಾಡಲು ಸಾಧ್ಯವಿದೆ (ಮತ್ತಾಯ 27:57-61; ಮಾರ್ಕ 15:42-47; ಲೂಕ 23:50-56; ಯೋಹಾನ 19:38-42). ಯೆಹೂದ್ಯರ ಆಡಳಿತಗಾರನಾದ ನಿಕೊದೇಮನು ಸಹ ಯೋಸೇಫನ ಪಟ್ಟಿಗೆ ಸೇರಿರುವನು (ಕೆಲವು ಅನುವಾದಗಳಲ್ಲಿ ಇರುವದಿಲ್ಲ), ಸರಿಯಾದ ವಿಚಾರಣೆ ಮಾಡದೆ ಯೇಸುವನ್ನು ಕೊಲ್ಲಬಾರದೆಂದು ನಿಕೋದೇಮನು ಸಭಾ ಹಿರಿಯರಿಗೆ ತಿಳಿಸಿದ್ದನು (ಯೋಹಾನ 3:1, 10; 7:50-52).

ಯೋಹಾನನ ಸುವಾರ್ತೆಯಲ್ಲಿ, ಯೇಸುವಿನ ವಿರೋಧಿಗಳನ್ನು ಯೆಹೂದ್ಯರು ಎಂದು ತಿಳಿಸಿರುವದರಿಂದ, ಯೇಸುವಿನ ಮರಣಕ್ಕೆ ಅವರೇ ಕಾರಣರು ಎಂಬ ಅನಿಸಿಕೆ ಉಂಟಾಗುತ್ತದೆ. ಅದೇ ರೀತಿಯಲ್ಲಿ, ಮೊದಲ ಇತಿಹಾಸಕಾರನಾದ ಯೋಸೇಫಸನು ರೋಮಾಯರ ಮತಾಭಿಮಾನಿಗಳ ನಿಮಿತ್ತ ಕ್ರಿ.ಶ. 70ರಲ್ಲಿ ಯೆರೂಸಲೇಮಿನ ನಾಶನವಾಯಿತು. ಅದಕ್ಕೆ ಕಾರಣರಾದವರು ಕೇಲವೇ ಕೆಲವು ಯೆಹೂದ್ಯರಾಗಿದ್ದರೂ, ಯೆಹೂದ್ಯರೆಲ್ಲರಿಗೂ ಅನಿಂದನೆಯನ್ನು ಮಾಡಲಾಗಿತ್ತು. ಯೋಹಾನನು ಸಹ ಇದೇ ವಿಧವಾದ ಹೇಳಿಕೆಯನ್ನು ನೀಡಿರುವನು.[3] ಅದೇ ರೀತಿಯಲ್ಲಿ ಹಳೇಒಡಂಬಡಿಕೆಯ ಇಬ್ರಿಯ ಪ್ರವಾದಿಗಳು ಸಹ ಯೆಹೂದ್ಯರ ಕುರಿತು ಹೇಳಿರುವರು, ಯೆಹೂದ್ಯರ ವಿರೋದಿ ತತ್ವವನ್ನು ಸುವಾರ್ತೆಗಳು ಅನುಮೋದಿಸುವದಿಲ್ಲ, (ಮೂಲಕ ಗ್ರಂಥವನ್ನು ಗಮನಿಸಿ.)

ಮತ್ತಾಯ 27:25ರಂತೆ, ಯೇಸುವಿನ ವಿಚಾರದ ನಂತರ ಪಿಲಾತನು "ತನ್ನ ಕೈಗಳನ್ನು ತೊಳಕೊಂಡನು" (ವಚನ 24), ಜನರು (ಮಹಾಯಾಜಕರ ಹಾಗೂ ಹಿರಿಯರ ಸ್ಪೂರ್ತಿಯ ಪ್ರಕಾರ) ನಂತರ ಜನರು ಕೂಗಿ, "ಆತನ ರಕ್ತವು ನಮ್ಮ ಮೇಲೆಯೂ ನಮ್ಮ ಮಕ್ಕಳ ಮೇಲೆಯು ಇರಲಿ" ಅಂದರು. ಈ ಹೇಳಿಕೆಯ ಮೇರೆಗೆ, ಯೆಹೂದ್ಯರೆಲ್ಲರೂ, ಹಾಗೂ ಎಲ್ಲಾ ಸಮಯದಲ್ಲೂ ಅವರು ವಿರೋಧಿಗಳೇ ಎಂದು ಭಾವಿಸಲಾಗಿದೆ. ಆದರೆ ಈ ಹೇಳಿಕೆಯನ್ನು ಅನುಮೋದಿಸಿರುವದಿಲ್ಲ. ಆದ್ದರಿಂದ ಮತ್ತಾಯನು "ಜನರು" ಎಂಬ ಸರಳ ಭಾಷೆಯನ್ನು ಬಳಸಿರುವನಷ್ಟೆ.

ಯೆಹೂದ್ಯ ಬರಹಗಾರರ ಪ್ರಕಾರ, ಯೆಹೂದಿಯಾದ ಯೇಸುವನ್ನು, ಯೆಹೂದ್ಯರೇ ಶಿಲುಬೆಗೆ ಹಾಕಿದರು ಎಂದಿರುವರು (ಆದರೆ ಲೂಕನು ಮಾತ್ರ ಅನ್ಯ ಬರಹಗಾರನಾಗಿದ್ದನು). ಯೇಸುವಿನ ಹಾಗೂ ಯೇಸುವನ್ನು ಹಿಂಬಾಲಿಸಿದ ಆದಿ ಜನರು ಯೆಹೂದ್ಯರೇ ಆಗಿದ್ದರಿಂದ "ಯೆಹೂದ್ಯ ವಿರೋದತ್ವವು" ಇದಕ್ಕೆ ತದ್ವಿರುದ್ಧವಾ ಗಿರುತ್ತದೆ. ಸುವಾರ್ತೆಗಳಲ್ಲಿ ದಾಖಲಾಗಿರುವ "ವಿರೋಧಿ ಯೆಹೂದ್ಯರ" ವಿಚಾರವು, ಆ ಸಂದರ್ಭಕ್ಕೆ ಅನುಗುಣವಾಗಿದೆಯಷ್ಟೆ. ಆ ಹಿನ್ನೆಲೆಯಲ್ಲಿರುವ ಹೇಳಿಕೆಯನ್ನು ಪ್ರಚಲಿತ ವಾಗಿ ಅನುಕರಿಸುವದು ಇತಿಹಾಸ ಹಾಗೂ ಹೇಳಿಕೆಯ ನ್ಯಾಯಯುತವಾದ ಅನುವಾದಕ್ಕೆ ವಿರೋಧವಾಗಿದೆ.

ನಾವು ಯಾವುದೇ ವಿಧವಾದ ಕಟ್ಟು ಕಥೆಯನ್ನು ಹೇಳಿ, ಅದರ ಕುರಿತು ಆತ್ಮೀಕವಾದ ರಾಷ್ಟ್ರಿಯವಾದ, ಹಾಗೂ ಉದ್ವೇಗಕ್ಕನುಗುಣವಾದ ಅನುವಾದವನ್ನು ಮಾಡಿರುವದಿಲ್ಲ. ಮೊದಲ ಹಾಗೂ ಎರಡನೆಯ ಶತಮಾನದಲ್ಲಿದ್ದ ಯೆಹೂದ್ಯರು ಹಾಗೂ ಅನ್ಯರು ಕೂಡಿ ಯೇಸುವಿನ ಮರಣದ ಕುರಿತು ಮಾಡಿರುವ ಐತಿಹಾಸಿಕ ಅನುಮೋದನೆಯಾಗಿದೆ. ವೈಯಕ್ತಿಕವಾದ

ಅನಾನುಕೂಲತೆಗಳು ಇದ್ದರೂ ಸಹ ನಾವುಗಳು ಇತಿಹಾಸವನ್ನು ಬದಲಾಯಿಸಲು ಸಾಧ್ಯವಿಲ್ಲ. ಒಬ್ಬನ ಹೇಳಿಕೆಯಂತೆ, ಇತಿಹಾಸವನ್ನು ಬದಲು ಮಾಡುವ ಪ್ರಯತ್ನದಿಂದ, ಅದನ್ನು ಕಳಕೊಳ್ಳುತ್ತೇವೆ; ಯಾಕೆಂದರೆ ಅದನ್ನು ನಮ್ಮ ಅನುಕೂಲತೆಗನುಗುಣವಾಗಿ ಬದಲಾಯಿಸಿ ದ್ದೇವೆ, ಇದರಿಂದ ಇತಿಹಾಸದಲ್ಲಿ ನಡೆದ ನೈಜ ಘಟನೆಯನ್ನು ಕಳಕೊಳ್ಳುತ್ತೇವೆ. ಸಕಲ ಮಾನವರ ರಕ್ಷಣೆಗಾಗಿ ಯೇಸು ತ್ಯಾಗ ಮಾಡಿದ ಪ್ರೀತಿಯ ಮರಣದ ಕಥೆ ಇದಾಗಿದೆ. "ಆತನನ್ನು ಕೊಂದವರಾರು" ಎಂಬುದು ತರ್ಕವಾಗದೆ, ಯೇಸು ಯಾರು ಹಾಗೂ ಆತನು ಮರಣವನ್ನು ಏಕೆ ಹೊಂದಿದನು ಎಂಬದು ಪ್ರಮುಖವಾಗಿದೆ.

ಅದೇ ಸಮಯದಲ್ಲಿ, ಆತನನ್ನು ಮರಣಕ್ಕೆ ನೇಮಿಸಿದ ವೈರಿಗಳು ಹಾಗೂ ಆತನ ಮರಣ ಶಿಕ್ಷೆಗೆ ಸೇರಿದವರ ಪಾತ್ರವು ಸಹ ಈ ಕಥೆಯಲ್ಲಿ ಅಡಕವಾಗಿದೆ. ಇದನ್ನು ಹೊರತು ಪಡಿಸಿದ ಕಥೆ ಇದಾಗುವದಿಲ್ಲ. ಈ ಮರಣಕ್ಕೆ ಕಾರಣರಾದವರ ನಿಮಿತ್ತವಾಗಿ ಒಂದು ಗುಂಪಿನ ಸಮೂಹವನ್ನೆಲ್ಲಾ ನಿಂದನೆ ಮಾಡಿ (ಅವರ ವಂಶದವರನ್ನು) ಅವರನ್ನು ದ್ವೇಷಿಸಬೇಕು ಎಂಬದು, ಒಂದು ತತ್ವವಲ್ಲ.

"ಯೇಸುವಿನ ಸೆಮಿನಾರ್" ಎಂಬ ಪಂಗಡದವರು, ಯೇಸುವಿನ ಐತಿಹಾಸಿಕ ಮರಣವನ್ನು ನಿರಾಕರಿಸುವ ಪ್ರಮೇಯವಿಲ್ಲ. ಸುವಾರ್ತೆಗಳು, ಯೆಹೂದ್ಯರು ವೈರತ್ವ ಎಂದು ಅವರು ಹೇಳುವದು ಸಲ್ಲ. ಸುವಾರ್ತೆಯಲ್ಲಿನ ಯೇಸುವಿನ ಮೆಸ್ಸೀಯತ್ವವನ್ನು ಹಾಗೂ ಒಡೆಯತ್ವವನ್ನು ನಿರಾಕರಿಸಲು ಸಾಧ್ಯವಿಲ್ಲ. ಅದರ ಬದಲು ಅವರು ಯೇಸುವನ್ನು ಉತ್ತಮ ಕಥೆ ಹೇಳುವ, ಮಕ್ಕಳನ್ನು ಆಶೀರ್ವದಿಸುವ ಯಾರನ್ನು ನೋಯಿಸದ ಅಲೆಮಾರಿ ಎಂದು ಪ್ರತಿಪಾದಿಸಿದ್ದಾರೆ. ಹೇಳಿಕೆಯ ಮೂಲಕ ಯೇಸುವನ್ನು ಮರಣವನ್ನು ಒಂದುತೊಡಕನ್ನಾಗಿ ಮಾಡಿದ್ದಾರೆ.

ಪಿಲಾತನ ಕೈಯಿಂದ (ಯೆಹೂದ್ಯರ ಪ್ರಚೋದನೆಯಿಂದ) ಉಂಟಾದ ಯೇಸುವಿನ ಮರಣವು ಇತಿಹಾಸದಲ್ಲಿ ಒಂದು ಗುರುತರ ಅಂಶವಾಗಿದೆ. ಅನ್ಯರ ಹಾಗೂ ಕ್ರೈಸ್ತರ ಮೂಲಕ ಈ ಅಂಶವು ಪ್ರಚಲಿತವಾಗಿರುತ್ತದೆ. ಸುವಾರ್ತೆಗಳ ಪ್ರಕಾರ ಯೇಸು ಎಲ್ಲವನ್ನು ಅನುಭವಿಸಿದ್ದರೆ, ಯೇಸುವನ್ನು ಏಕೆ ಕೊಲ್ಲಬೇಕಿತ್ತು ಎಂಬ ವಿಷಯದಲ್ಲಿ ವಿಚಾರ ಮಾಡುವದು ವ್ಯರ್ಥವೇ ಸರಿ.

## ಯೇಸುವಿನ ಮರಣದ ಕುರಿತು

## ದೈವಶಾಸ್ತ್ರದ ಉತ್ತರ

ಯೇಸುವಿನ ಮರಣದ ಕುರಿತ ಎರಡನೆಯ ಉತ್ತರವನ್ನು ಐತಿಹಾಸಿಕವಾಗಿ ಪಡೆಯಲು ಸಾಧ್ಯವಿಲ್ಲ. ಅದು ನಂಬಿಕೆಗೆ ಸಂಬಂಧ ಪಟ್ಟ ಅಂಶವಾಗಿ ರುವದರಿಂದ ಅದನ್ನು ಐತಿಹಾಸಿಕವಾಗಿ ಸಾಬೀತುಪಡಿಸಲು ಅಸಾಧ್ಯ. ಇದರ ವಿಚಾರದಲ್ಲಿ ಐತಿಹಾಸಿಕವಾಗಿ ಪಡೆದಿರುವ ಉತ್ತರವನ್ನೆ ಈ ಸಂಗತಿಗಳು ನಮಗೆ ತಿಳಿಸುತ್ತವೆ. ಬಾಹಿರ ಪ್ರಕಾರವಾಗಿ ಉತ್ತರಗಳು ದೊರಕುವದರಿಂದ, ಅವುಗಳನ್ನು ದೈವಶಾಸ್ತ್ರಕ್ಕನುಗುಣವಾಗಿ ಐತಿಹಾಸಿಕವಾ ಗಿಯೇ ದೊರೆತಿರುವ ಉತ್ತರಗಳಿಗೆ ಹೋಲಿಕೆ ಮಾಡಬಹುದಾಗಿದೆ. ಆತನ ಮರಣದ ಕುರಿತ ಸುವಾರ್ತೆಗಳಲ್ಲಿ ತಿಳಿಸಿರುವ ದೈವ ಶಾಸ್ತ್ರದ ಉತ್ತರವನ್ನು ಆಯ್ಕೆಮಾಡುವದಾದರೂ, ಆದಿ ಕ್ರೈಸ್ತರು ಅದನ್ನೇ ನಂಬಿದ್ದರು ಎಂಬ ಅಂಶವನ್ನು ನಾವುಗಳು ಅಲ್ಲಗಳೆಯುವಂತಿಲ್ಲ. ದೈವ ಶಾಸ್ತ್ರದ ಪ್ರಕಾರ, ಯೇಸು *ಏಕೆ* ಸತ್ತನು?

**ಅದರ ಉದ್ದೇಶವನ್ನು ಈಡೇರಿಸಲು**

ಆತನು ಶಿಲುಬೆಯ ಮೇಲೆ ಸಾಯುವದು ಅಗತ್ಯವೆಂದು ಯೇಸು ತಾನೇ ತಿಳಿಸಿರುವನು.

ಅದರ ಅರ್ಥವೇನು? "ಮನುಷ್ಯ ಕುಮಾರನು ಬಹಳ ಕಷ್ಟಗಳನ್ನು ಅನುಭವಿಸಿ ಹಿರಿಯರಿಂದಲೂ, ಮಹಾಯಾಜಕರಿಂದಲೂ ಶಾಸ್ತ್ರಿಗಳಿಂದಲೂ ನಿರಾಕೃತನಾಗಿ ಕೊಲ್ಲಲ್ಪಟ್ಟು ಮೂರನೆಯ ದಿನದಲ್ಲಿ ಎಬ್ಬಿಸಲ್ಪಡಬೇಕಾಗಿದೆ" (ಲೂಕ 9:22). ಈ ಹೇಳಿಕೆ ಯಲ್ಲಿ ಆತನು ಗ್ರೀಕ್ ಭಾಷೆಯ ಒಂದು ಚಿಕ್ಕ ಪದವನ್ನು ಬಳಸಿರುವನು "ಅಗತ್ಯ ಎಂಬ ಪದ" ಅಂದರೆ ಮಾಡಲೇ ಬೇಕು ಎಂಬ ಅರ್ಥ. ಅದು ದೈವಿಕವಾದ ಆಂತರಿಕವಾದ ಅಥವಾ ಸಂದರ್ಭಕ್ಕನುಗುಣವಾಗಿ ಮಾಡಲೇಬೇಕಾದ ಸಂಗತಿಯಾಗಿತ್ತು. ಈ ಎಲ್ಲಾ ವಿಷಯಗಳ ನಿಮಿತ್ತ ಯೇಸು ಸತ್ತನು. ಯೇಸುವಿನ ಮರಣವು ಆಕಸ್ಮಿಕವೂ ಅಲ್ಲ, ಹಾಗೂ ತಪ್ಪಿಸಲೂ ಸಾಧ್ಯವಿರಲಿಲ್ಲ. ಅದು ದೈವೀಕ ಅಗತ್ಯವಾಗಿದ್ದ ಆತನ ಜೀವಿತವು ಆ ಮರಣದ ಕಡೆಗೆ ನಡೆಯುತ್ತಿತ್ತು (ಲೂಕ 9:44, 18:31-33). ಯೇಸು ಸಾಯುತ್ತಿರುವಾಗ "ತೀರಿತು!" ಅಂದನು (ಯೋಹಾನ 19:30). ಯಾವ ಸಂಗತಿಯು ತೀರಿತು? ಆ ಮರಣದ ಮೂಲಕ ಆತನು ಏನನ್ನು ಸಾಧಿಸಿದನು?

**ಆತನು ಹೊಸ ಒಡಂಬಡಿಕೆಯನ್ನು ಸ್ಥಾಪಿಸಿದನು**

ಈ ಪ್ರಶ್ನೆಗೆ ಮತ್ತಾಯ 26:26-28 ಸರಿಯಾದ ಉತ್ತರವನ್ನು ನೀಡುತ್ತದೆ. ಯೇಸು ತನ್ನ ಶಿಷ್ಯರೊಂದಿಗೆ ಕಡೇಯ ಭೋಜನವನ್ನು ಮಾಡುವಾಗ, ರೊಟ್ಟಿ ಮತ್ತು ದ್ರಾಕ್ಷಾರಸವನ್ನು ಅವರಿಗೆ ಹಂಚಿದನು. ರೊಟ್ಟಿ, ಆತನ ದೇಹದ ಸಂಕೇತವಾಗಿದ್ದರೆ, ಪಾತ್ರೆಗೆ ಆತನು "ಇದು ಹೊಸ ಒಡಂಬಡಿಕೆಯ ರಕ್ತ" ಅನೇಕರ ಪಾಪ ಶುದ್ಧಿಗಾಗಿ ಸುರಿಸಲ್ಪಡುವ ರಕ್ತ ಅಂದನು. ದೇವರಿಗೂ ಮತ್ತು ಮಾನವರಗೂ ನಡುವೆ ಉಂಟಾದ ಒಡಂಬಡಿಕೆಗೆ ಆತನ ಮರಣವೇ ಕೇಂದ್ರ ಬಿಂದುವಾಯಿತು. ಪ್ರಾಣಿಗಳ ರಕ್ತದಿಂದ ಹಳೇ ಒಡಂಬಡಿಕೆ ಸ್ಥಾಪನೆಯಾದರೆ, ಯೇಸು ತನ್ನ ಸ್ವಂತ ರಕ್ತವನ್ನು ಸುರಿಸುವದರ ಮೂಲಕ ಹೊಸ ಒಡಂಬಡಿಕೆಯನ್ನು ಸ್ಥಾಪಿಸಿದನು (ಇಬ್ರಿಯ 9:15-22). ಯೇಸು ಪ್ರಾಣ ನೀಡಿದಾಗ, "ಪಾಪಕ್ಷಮೆ ಉಂಟಾಯಿತು" ಎಂಬ ಇನ್ನೊಂದು ಅಂಶದ ಅಗತ್ಯವೇಕೆ? ಹೊಸ ಒಡಂಬಡಿಕೆಯ ಪ್ರಕಾರ, ಯೇಸು ಪ್ರಾಣ ನೀಡಿದ್ದರಿಂದ ಪಾಪಕ್ಷಮೆ ಆಯಿತು ಎಂದು ಗಮನಿಸುತ್ತೇವೆ. ಆದ್ದರಿಂದ ಯೋಹಾನ 1:29ರಲ್ಲಿ ಯೋಹಾನನು ಯೇಸುವನ್ನು "ಅಗೋ (ಯಜ್ಞಕ್ಕೆ) ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು" ಎಂದು ಹೇಳಿರುವನು! ಇಸ್ರಾಯೇಲ್ಯರು ತಮ್ಮ ಪಾಪ ನಿವಾರಣೆಗಾಗಿ, ಕುರಿಗಳನ್ನು ಮತ್ತು ಇತರೆ ಪ್ರಾಣಿಗಳನ್ನು ಸಮರ್ಪಿಸಿದ ಹಾಗೆ, (ಇಬ್ರಿಯ 9 ನಂತರ) ಯೇಸು ಲೋಕದ ಪಾಪ ನಿವಾರಣೆಗಾಗಿ ತನ್ನನ್ನೇ ಅರ್ಪಿಸಿದನು. ಆದ್ದರಿಂದ ಇನ್ನೆಂದಿಗೂ, ಮತ್ತೊಂದು ಅರ್ಪಣೆಯ ಅಗತ್ಯವಿರುವದಿಲ್ಲ (ನೋಡಿರಿ ಇಬ್ರಿಯ 10:11-18; ರೋಮಾಪುರ 3:21-26).

**ಪಾಪದ ಪರಿಹಾರವನ್ನು ನೀಡುವ ಸಲುವಾಗಿ**

ಶಾಸ್ತ್ರಗಳ ಪ್ರಕಾರ, ನಮ್ಮ ಪಾಪಗಳಿಗಾಗಿ ಯೇಸು ಸತ್ತನು ಎಂಬ ಸುವಾರ್ತೆಯ ಮುಖ್ಯ ಸಂದೇಶವನ್ನು ಆದಿ ಕ್ರೈಸ್ತರು ಪ್ರಚುರ ಪಡಿಸಿದರು (1 ಕೊರಿಂಥ 15:3). ಯೇಸು ನಮ್ಮೆಲ್ಲರ ದ್ರೋಹವನ್ನು ಹೊತ್ತುಕೊಂಡು ಶಿಕ್ಷೆ ಹೊಂದಿದನು ಎಂದು ಹೊಸ ಒಡಂಬಡಿಕೆಯು ಸಹ ತಿಳಿಸುತ್ತದೆ. ನಮ್ಮೆಲ್ಲರ ದ್ರೋಹದ ಫಲವನ್ನು ದೇವರು ಯಜ್ಞದ ಕುರಿತಾದ ತನ್ನ ಮಗನ ಮೇಲೆ ಪರಿಹಾರವಾಗಿ ಹೊರಿಸಿದನು. ಯೆಶಾಯ 53ರ 1 ಪೇತ್ರ 2:24ರಲ್ಲಿ ಸ್ಪಷ್ಟ ಪಡಿಸಲಾಗಿದೆ: "ನಾವು ಪಾಪದ ಪಾಲಿಗೆ ಸತ್ತು ನೀತಿವಂತರಾಗಿ ಜೀವಿಸುವಂತೆ ಆತನು ನಮ್ಮ ಪಾಪಗಳನ್ನು ತಾನೇ ತನ್ನ ದೇಹದಲ್ಲಿ ಹೊತ್ತುಕೊಂಡು ಮರಣದ ಕಂಬವನ್ನು ಏರಿದನು; ಆತನ ಬಾಸುಂಡೆಗಳಿಂದ ನಿಮಗೆ ಗುಣವಾಯಿತು."

ಪಾಪದ ಅಂಶವನ್ನು ಹೊರತು ಪಡಿಸಿ, ಯೇಸುವಿನ ಮರಣವನ್ನು ಪ್ರತ್ಯೇಕ ಮಾಡುವದು

ಅಸಾಧ್ಯ. ಪ್ರಚಲಿತವಾಗಿ ಪ್ರಪಂಚದಲ್ಲಿ ಪಾಪದ ವಿಚಾರವು ಅಲೌಕಿಕ ಸಂಗತಿಯಾಗಿದೆ. ಪಾಪವನ್ನು ಹೊರತುಪಡಿಸಿದರೆ, ಯೇಸುವಿನ ಮರಣವು ಅರ್ಥವಿಲ್ಲದ ಬಾಧೆಯಾಗಿದೆ. ಪಾಪದ ಕುರಿತಾಗಿ ಯೋಚಿಸುವಾಗ, ಯೇಸುವಿನ ಮರಣವು ವಿಶೇಷ ಅರ್ಥವನ್ನು ನೀಡುತ್ತದೆ.

**ಮರಣದ ಜಯ**

ಯಾವುದೇ ವಿಧವಾದ ಪ್ರತಿಷ್ಟೆಗಳು, ಯೇಸುವಿನ ಮರಣದ ಅರ್ಥವನ್ನು ನಿರರ್ಥಕ ಮಾಡಲಾರವು. ನಮ್ಮ ಪರವಾಗಿ ಯೇಸು ಮರಣವನ್ನು ಅನುಭವಿಸಿದನು ಎಂದು ರೋಮಾಪುರ 5:12-21ರಲ್ಲಿ ಪೌಲನು ವಾದ ಮಾಡಿರುವನು. ಮರಣವನ್ನು ಒಪ್ಪಿ, ಮರಣದಿಂದ ಎದ್ದು ಬಂದ ನಿಮಿತ್ತ ಆತನ ಜಯದಲ್ಲಿ ನಾವುಗಳು ಸಹ ಪಾಲುದಾರರಾಗಿದ್ದೇವೆ. ಇಬ್ರಿಯ 2:14, 15ರ ಪ್ರಕಾರ, ನಾವು ಮರಣದಿಂದ ಮಾತ್ರ ಬಿಡುಗಡೆ ಹೊಂದದೆ, ಅದರ ಭಯದಿಂದಲೂ ಬಿಡುಗಡೆ ಪಡೆದಿದ್ದೇವೆ ಎಂಬ ಅರ್ಥವಾಗಿದೆ. ಪಂಡಿತನಾದ ವಿಲಿಯಮ್ ಜೇಮ್ಸ್‌ರವರ ಪ್ರಕಾರ, ನಮ್ಮೆಲ್ಲರ ಸಂತೋಷಕ್ಕೆ ಮರಣವು ಕೊರೆಯುವ ಹುಳದಂತಿದೆ. ಈ ವಿಚಾರವು ಸರಿಯಾಗಿದ್ದರೂ ಸಹ, ಯೇಸುವಿನ ನಿಮಿತ್ತ, ನಾವುಗಳು ಮರಣದ ಭಯದಿಂದ ಮುಕ್ತರಾಗಿದ್ದೇವೆ.

**ಧರ್ಮಶಾಸ್ತ್ರವನ್ನು ನೆರವೇರಿಸಿ, ಅದನ್ನು ತೆಗೆದು ಹಾಕಿದೆ**

ಯೇಸುವಿನ ಮರಣವು ನಮ್ಮನ್ನು ಧರ್ಮಶಾಸ್ತ್ರವೆಂಬ ಶಾಪದಿಂದ, ಮುಕ್ತಗೊಳಿಸಿದೆ ಎಂದು ಪೌಲನು ತಿಳಿಸಿರುವನು (ಗಲಾತ್ಯ 3:13, 14). ಅಂದರೆ ಹಳೆಯ ಧರ್ಮಶಾಸ್ತವು ಶಾಪವೆಂದು ಅವನು ಪರಿಗಣಿಸುತ್ತಿರುವದಿಲ್ಲ. ಧರ್ಮಶಾಸ್ತ್ರವನ್ನು ಅನುಸರಣೆ ಮಾಡಲಾಗದ ಪರಿಸ್ಥಿತಿಯನ್ನು ಅವನು ಶಾಪ ಎಂದಿರುವನು. ನಾವು ಅವುಗಳ ಪಾಲನೆ ಮಾಡುವ ಸಾಮರ್ಥ್ಯವಿಲ್ಲದೆ ಇರುವದರಿಂದ, ನಾವುಗಳು ಶಾಪಕ್ಕೆ ಒಳಗಾಗಿದ್ದೇವೆ. ನಾವು ಅದನ್ನು ಪರಿಪೂರ್ಣವಾಗಿ ನೆರವೇರಿಸಿದರೆ ಮಾತ್ರ ನಮಗೆ ಅದರಿಂದ ವಿಮೋಚನೆ, ಇಲ್ಲದೆ ಹೋದರೆ, ಅಧರ್ಮಶಾಸ್ತ್ರವು ನಮಗೆ ನ್ಯಾಯಾಧಿಪತಿಯಾಗಿ ನಿಲ್ಲುತ್ತದೆ (ಯಾಕೋಬ 2:10, 11); ಅದು ನಮ್ಮ ತಪ್ಪನ್ನು ಕಂಡು ಹಿಡಿಯುತ್ತದೆ. ಅದನ್ನು ಸರಿಪಡಿಸುವ ಸಾಮರ್ಥ್ಯವನ್ನು ಹೊಂದಿರುವದಿಲ್ಲ. ತನ್ನದೇ ಆದ ನಿಯಗಳಿಂದ ನಮಗೆ ತೀರ್ಪು ನೀಡುತ್ತದೆ. ರಕ್ಷಣೆಯನ್ನು ನೀಡುವಲ್ಲಿ ಧರ್ಮಶಾಸ್ತ್ರವು ಬಲಹೀನವಾದ್ದರಿಂದ, ಯೇಸು ತನ್ನ ಮರಣದಿಂದ ನಮಗೆ ವಿಮೋಚನೆ ನೀಡಿರುವನು ಎಂದು ಪೌಲನು ತಿಳಿಸಿರುವನು. ಪಾಪವನ್ನು ದೇಹದಲ್ಲಿ ಹೊತ್ತವನಾಗಿ, ಪಾಪಕ್ಕಾಗಿ ಅರ್ಪಿತನಾದನು, ಆತನ ದೇಹದಲ್ಲಿ ದೇವರು ಪಾಪಕ್ಕೆ ತೀರ್ಪು ನೀಡಿದನು (ರೋಮಾಪುರ 8:3). ಯೇಸುವಿನ ಮರಣದ ಮೂಲಕ "ಧರ್ಮಶಾಸ್ತ್ರದ ಶಾಪದಿಂದ" ಮುಕ್ತರಾಗಿದ್ದೇವೆ. ನಮ್ಮ ಸ್ವಂತ ಶಕ್ತಿಯಿಂದ ನಮಗೆ ಸಾಮರ್ಥ್ಯವಿಲ್ಲದೆ ಇದ್ದರೂ, ಯೇಸುವಿನ ರಕ್ತದ ಮುಖಾಂತರ ಸಾಮರ್ಥ್ಯ ಹೊಂದಿದ್ದೇವೆ.

**ನೂತನ ಜೀವಿತವನ್ನು ನೀಡುವ ಸಲುವಾಗಿ**

"ಧರ್ಮಶಾಸ್ತ್ರದಿಂದ" ವಿಮೋಚನೆ ಎಂದರೆ, "ಪಾಪಕ್ಕೆ ಸತ್ತವರಾಗಿ ಯೇಸುವಿನ ಮರಣದ ಮೂಲಕ ನೀತಿಗೆ ಬದುಕುವವರಾಗಿದ್ದೇವೆ" ರೋಮಾಪುರ 6:1-4ರಲ್ಲಿ ಪೌಲನು ಪ್ರತಿಕ್ರಿಯಿಸಿ, ಯೇಸುವಿನಲ್ಲಿ "ದೇವರ ಕೃಪೆಯಿದೆ!" ಎಂದು ತಿಳಿದು ಪಾಪದಲ್ಲಿ ಮುಂದುವರೆಯಬಾರದು:

ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನಮಾಡಿಸಿಕೊಂಡವರಾದ ನಾವೆಲ್ಲರು

> ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ? ಹೀಗಿರಲಾಗಿ ನಾವು ದೀಕ್ಷಾಸ್ನಾನಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು (ವಚನಗಳು 3, 4).

ಯೇಸು ನಮಗಾಗಿ ಮರಣವನ್ನು ಹೊಂದಿದಲ್ಲದೆ, ದಿಕ್ಷಾಸ್ನಾನದ ಮೂಲಕ ನಾವುಗಳು ಆತನ ಮರಣದಲ್ಲಿ ಪಾಲುಗಾರರಾಗಬಹುದು, ಮರಣದಿಂದ ಎದ್ದು ಬರುವೆವು ಎಂಬ ಭರವಸೆಯನ್ನು ಸಹ ಹೊಂದಿದ್ದೇವೆ. ಇಬ್ರಿಯ 9:11-14ರಲ್ಲಿ ಇದೇ ಆಲೋಚನೆಯನ್ನು ನೀಡಲಾಗಿದೆ:

> ಆದರೆ ಕ್ರಿಸ್ತನು ಈಗ ದೊರೆತಿರುವ ಮೇಲುಗಳನ್ನು ಕುರಿತು ಮಹಾಯಾಜಕನಾಗಿ ಬಂದು ಕೈಯಿಂದ ಕಟ್ಟಲ್ಪಡದಂಥ ಅಂದರೆ ಈ ಸೃಷ್ಟಿಗೆ ಸಂಬಂಧ ಪಡದಂಥ ಘನ ವಾಗಿಯೂ ಉತ್ಕೃಷ್ಟವಾಗಿಯೂ ಇರುವ ಗುಡಾರದಲ್ಲಿ ಸೇವೆಯನ್ನು ಮಾಡುವವನಾಗಿ ಹೋತಗಳ ಮತ್ತು ಹೋರಿಕರಗಳ ರಕ್ತವನ್ನು ತೆಗೆದುಕೊಳ್ಳದೆ ಸ್ವಂತ ರಕ್ತವನ್ನೇ ತೆಗೆದುಕೊಂಡು ನಮಗೋಸ್ಕರ ನಿತ್ಯವಿಮೋಚನೆಯನ್ನು ಸಂಪಾದಿಸಿ ಕೊಂಡವನಾಗಿ ಒಂದೇ ಸಾರಿ ದೇವರ ಸನ್ನಿಧಾನಕ್ಕೆ ಪ್ರವೇಶಿಸಿದನು. ಹೋತ ಹೋರಿಗಳ ರಕ್ತವೂ ಹೊಲೆಯಾದವರ ಮೇಲೆ ಚೆಲ್ಲುವ ಕಡಸಿನ ಬೂದಿಯೂ ಶರೀರದ ಹೊಲೆಯನ್ನು ಹೋಗಲಾಡಿಸಿ ಪವಿತ್ರ ಮಾಡುವದಾದರೆ ನಿತ್ಯಾತ್ಮನಿಂದ ತನ್ನನ್ನು ತಾನೇ ನಿರ್ದೋಷಿ ಯನ್ನಾಗಿ ದೇವರಿಗೆ ಸಮರ್ಪಿಸಿಕೊಂಡ ಕ್ರಿಸ್ತನ ರಕ್ತವು ಎಷ್ಟೋ ಹೆಚ್ಚಾಗಿ ನಮ್ಮನ್ನು ನಿರ್ಜೀವಕರ್ಮಗಳಿಂದ ಬಿಡಿಸಿ ನಾವು ಜೀವವುಳ್ಳ ದೇವರನ್ನು ಆರಾಧಿಸುವವರಾ ಗುವಂತೆ ನಮ್ಮ ಮನಸ್ಸನ್ನು ಶುದ್ಧೀಕರಿಸುವದಲ್ಲವೇ?

**ಒಂದು ಉತ್ತಮವಾದ ನಿದರ್ಶನ**

ಆತನು ನೀತಿಗಾಗಿ, ಅನ್ಯಾಯವಾದ ಮರಣದ ಶಿಕ್ಷೆಯನ್ನು ಹೊಂದಿದನು. ತಪ್ಪು ಮಾಡಿ, ಬಾಧೆಗಳನ್ನು ಹೊಂದದೆ, ನೀತಿಗಾಗಿ ವೇದನೆ ಹೊಂದಿದನು. ಯೇಸುವಿನ ಮರಣಕ್ಕೆ ಕೇವಲ ಈ ವಿಚಾರವು ಮಾತ್ರ ಕಾರಣವಾಗಿರುವದಿಲ್ಲ, ಮುಂದೆ ಆತನ ಅನುಯಾಯಿಗಳು ಪಡಬೇಕಾದ ವೇದನೆಗಳಿಗೆ, ಪೇತ್ರನು ಬರೆದಂತೆ,

> ... ಕ್ರಿಸ್ತನು ಸಹ ನಿಮಗೋಸ್ಕರ ಬಾಧೆಯನ್ನನುಭವಿಸಿ ನೀವುತನ್ನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕೆಂದು ಮಾದರಿಯನ್ನು ತೋರಿಸಿ ಹೋದನು. ಆತನು ಯಾವ ಪಾಪವನ್ನೂ ಮಾಡಲಿಲ್ಲ, ಆತನ ಬಾಯಲ್ಲಿ ಯಾವ ವಂಚನೆಯೂ ಸಿಕ್ಕಲಿಲ್ಲ; ಬೈಯುವವರನ್ನು ಆತನು ಪ್ರತಿಯಾಗಿ ಬೈಯಲಿಲ್ಲ; ಆತನು ಬಾಧೆಯನ್ನನುಭವಿಸಿದಾಗ ಯಾರನ್ನೂ ಬೆದರಸದೆ ನ್ಯಾಯವಾಗಿ ತೀರ್ಪುಮಾಡುವಾತನಿಗೆ ತನ್ನ ಕಾರ್ಯವನ್ನು ಒಪ್ಪಿಸಿದನು. ನಾವು ಪಾಪದ ಪಾಲಿಗೆ ಸತ್ತು ನೀತಿವಂತರಾಗಿ ಜೀವಿಸುವಂತೆ ಆತನು ನಮ್ಮ ಪಾಪಗಳನ್ನು ತಾನೇ ತನ್ನ ದೇಹದಲ್ಲಿ ಹೊತ್ತುಕೊಂಡು ಮರಣದ ಕಂಬವನ್ನು ಏರಿದನು; ಆತನ ಬಾಸುಂಡೆಗಳಿಂದ ನಿಮಗೆ ಗುಣವಾಯಿತು (1 ಪೇತ್ರ 2:21-24).

ಯೇಸುವಿನ ಮರಣದ ಕುರಿತಾಗಿ ಹೊಸ ಒಡಂಬಡಿಕೆಯ ಅನೇಕ ವಿಧವಾದ ಕಾರಣಗಳನ್ನು ನೀಡುವದಾದರೂ, ಆದಿ ಕ್ರೈಸ್ತರ ಈ ಆಲೋಚನೆಯು ಸಾಕಾದದ್ದಾಗಿದೆ. ಯೇಸುವಿನ ಮರಣದ ಕುರಿತು ಗೊತ್ತು ಗುರಿಯಿಲ್ಲದ ವಿಚಾರವು ಇದಾಗಿರುವದಿಲ್ಲ. ಯೇಸುವಿನ ಮಾತುಗಳಂತೆ, "ಇದು ಒಡಂಬಡಿಕೆಯ ರಕ್ತ ಇದು ಪಾಪಗಳ ಕ್ಷಮೆಗಾಗಿ ಬಹು ಜನರಿಗೋಸ್ಕರ ಸುರಿಸಲ್ಪಡುವ ರಕ್ತ" (ಮತ್ತಾಯ 26:28). ಯೇಸುವಿನ ಮರಣದ ಕುರಿತ ವಿವಿಧ ಚಿತ್ರಣಗಳನ್ನು ಈ ವಾಕ್ಯವು ನೀಡುತ್ತದೆ. ಮತಾವಲಂಭಿಗಳ ಗೊಂದಲಕ್ಕೆ ಸಿಲುಕಿದ

ಸಾಧಾರಣವಾದ ಮರಣವು ಇದಾಗಿರುವದಿಲ್ಲ. ತನ್ನ ಪ್ರಾಣವನ್ನು ಅನೇಕರಿಗಾಗಿ ತ್ಯಾಗ ಮಾಡಿದ ವಿವೇಕದ ಯೋಜನೆಯಾಗಿದೆ.

---

ಟಿಪ್ಪಣಿಗಳು

[1]Josephus *Wars* 2.9.2-3; *Antiquities* 18.3.1. [2]The usual term is "anti-Semitic," but since many Jews regard the term "Semitic" as derogatory, the less offensive term "anti-Jewish" is preferable. [3]Josephus *Wars* 2.466; 5.109-10; 6.71-79, 251-53.